<u>ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆಲೂರು.</u>

**ಸಿ.ಸಿ.ಸಂಖ್ಯೆ: 146/2020**

| | | |
|---|---|---|
| ಸಾಕ್ಷಿದಾರರ ಹೆಸರು | ದಿನೇಶ್ ಎ. | ಸಿ.ಡಬ್ಲ್ಯೂ: 8 |
| ಗಂಡನ / ತಂದೆ ಹೆಸರು | ಅಪ್ಪಾಜಯ್ಯ | ಪಿ.ಡಬ್ಲ್ಯೂ: 3 |
| ವಯಸ್ಸು | 56 ವರ್ಷ | |
| ಉದ್ಯೋಗ | ಎ.ಎಸ್.ಐ. | |
| ವಾಸಸ್ಥಳ | ಹಾಸನ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 03.07.2026

**ಮುಖ್ಯ ವಿಚಾರಣೆಃ ಸಸಅ ರಿಂದ**

2017 ರಿಂದ 2023 ರವರೆಗೆ ಆಲೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.20.12.2019 ರಂದು ಸಂಜೆ 4 ಕ್ಕೆ ಚಾಸಾ 1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ.210/19 ರಲ್ಲಿ ಪ್ರ.ವ.ವ ದಾಖಲಿಸಿರುತ್ತೇನೆ. ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 9 ರವರಿಗೆ ನೀಡಿರುತ್ತೇನೆ. ಸಾಕ್ಷಿ ನಿಪಿ 1 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1ಬಿ ಎಂದು ಗುರುತಿಸಲಾಯಿತು. ಪ್ರ.ವ.ವ. ಯನ್ನು ನಿಪಿ 4 ಎಂದು ಸಾಕ್ಷಿ ಸಹಿಯನ್ನು ನಿಪಿ 4ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಕಡಬಗಾಲದಿಂದ ಆಲೂರಿಗೆ 40-50 ನಿಮಿಷ ಬೇಕಾಗುತ್ತದೆ ಎಂದರೆ 20 ನಿಮಿಷ ಬೇಕಾಗುತ್ತದೆ. ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರ.ವ.ವ

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಂಜೆ 4 ಕ್ಕೆ ಚಾಸಾ 1 ರವರು ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ವಾಹನದಲ್ಲಿ ಬಂದಿರುತ್ತಾರೆ ಗೊತ್ತಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .